ಅಸಲು ದಾವೆ ನಂಃ 298/2023 ಪಿ . ಡಬ್ಲ್ಯೂಃ 1–ರಾಮಪ್ಪ ತಂದೆ ಹನಮಪ್ಪ ಸಾಂತಪ್ಪನವರ ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 25/03/2026 ರಂದು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ VDP ರವರಿಂದಃ**

ಈ ದಾವೆಯಲ್ಲಿ ವಿ.ಪಿ.ಸಿ.ನಂ.1299/ಎ, ವಿ.ಪಿ.ಸಿ.ನಂ.84/ಎ, ವಿ.ಪಿ.ಸಿ.ನಂ.125/ಬಿ, ವಿ.ಪಿ.ಸಿ.ನಂ.274/ಎ, ವಿ.ಪಿ.ಸಿ.ನಂ.404/1, ವಿ.ಪಿ.ಸಿ.ನಂ.404/2 ಮತ್ತು ವಿ.ಪಿ.ಸಿ.ನಂ.457 ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ 2 ನೇ ಪ್ರತಿವಾದಿಯವರಿಗೂ ಸಹ ಹಿಸ್ಸಾ ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯವರು ನಮ್ಮ ಸ್ವಾಧೀನಕ್ಕೆ ಅಡ್ಡಿಪಡಿಸಿರುವುದಿಲ್ಲ. ನನ್ನ ತಂದೆಯವರು ಇದ್ದಾಗ ಪಾಲು ವಿಭಾಗ ಆದ ಪ್ರಕಾರ ನಾನು ಮತ್ತು 2 ನೇ ಪ್ರತಿವಾದಿಯವರು ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ದಾವೆಯನ್ನು ಹಾಕಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ತಂದೆಯವರು ನಿಧನರಾಗುವ ಕಾಲಕ್ಕೆ ಅವರಿಗೆ 84 ವರ್ಷ ವಯಸ್ಸಾಗಿತ್ತು. ನನ್ನ ತಂದೆಯವರು 2017ರಲ್ಲಿ ನಿಧನರಾಗಿರುತ್ತಾರೆ. ಈ ದಾವೆಯನ್ನು ಮಾಡುವ ಪೂರ್ವದಲ್ಲಿ ನನ್ನ ತಂದೆಯವರು ನಿಧನರಾಗಿದ್ದರು ಎಂದರೆ ಸರಿ. ಈ ದಾವೆಯನ್ನು ದಾಖಲು ಮಾಡುವಾಗ ನಮ್ಮ ವಕೀಲರಿಗೆ ನನ್ನ ತಂದೆಯವರು ನಿಧನರಾಗಿರುವ ವಿಷಯವನ್ನು ತಿಳಿಸಿದ್ದೆ. ನನ್ನ ತಂದೆಯವರು ನಿಧನರಾದ ನಂತರ ವಾರಸುದಾರರಾಗಿ ನನ್ನ ತಾಯಿಯವರು ಮತ್ತು ನಾವು ಮೂರು ಜನ ಮಕ್ಕಳು ಬಂದಿರುತ್ತೇವೆ. ತಿದ್ದುಪಡಿ ಮಾಡುವುದಕ್ಕಿಂತ ಪೂರ್ವದಲ್ಲಿ ಸಲ್ಲಿಸಿರುವ ವಾದಪತ್ರದಲ್ಲಿರುವ ಸಹಿಗಳು ಯಾರದ್ದು ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ವಾದಪತ್ರಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ನನ್ನ ತಂದೆಯವರು ನಿಧನರಾಗಿರುವ ವಿಷಯವನ್ನು ನ್ಯಾಯಾಲಯಕ್ಕೆ ದಾವೆಯನ್ನು ದಾಖಲು ಮಾಡುವಾಗ ತಿಳಿಸಿರುತ್ತೇವೆ. ದಾವೆಯನ್ನು ದಾಖಲು ಮಾಡುವಾಗ ವಾದಪತ್ರದಲ್ಲಿರುವ ಮಾಹಿತಿಯನ್ನು ನಮ್ಮ ವಕೀಲರು ನನ್ನ ಅಣ್ಣನಿಗೆ ತಿಳಿಸಿರುತ್ತಾರೆ. ದಾವೆಯನ್ನು ದಾಖಲು ಮಾಡುವಾಗ ನಾನು ಮತ್ತು ನನ್ನ ತಾಯಿಯವರು ನ್ಯಾಯಾಲಯಕ್ಕೆ ಬಂದಿರಲಿಲ್ಲ. ವಾದಿಯವರ ತಂದೆ ಮತ್ತು 2 ನೇ ಪ್ರತಿವಾದಿಯವರ ತಂದೆಯವರು ಅಣ್ಣ ತಮ್ಮಂದಿರು ಎಂದರೆ ಸರಿ. 2 ನೇ ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ಸರಿಯಾಗಿ ಪಾಲನ್ನು ಮಾಡಿಕೊಡುವಂತೆ ನನಗೆ ಮತ್ತು ನನ್ನ ತಾಯಿಯವರಿಗೆ ಹಾಗೂ ನನ್ನ ಅಣ್ಣನವರಿಗೆ ಕೇಳಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರ ಕಾಲಕ್ಕೆ ಪಾಲು ವಿಭಾಗ ಆಗಿರುತ್ತದೆ 2 ನೇ ಪ್ರತಿವಾದಿಯವರು ಅವರ ತಂದೆಗೆ ಪಾಲು ವಿಭಾಗವನ್ನು ಕೇಳಬೇಕು, ನಮಗೆ ಯಾಕೆ ಕೇಳುತ್ತಾರೆ ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯವರು ಪಾಲು ವಿಭಾಗವನ್ನು ಕೇಳಿ ಬೇರೆ ದಾವೆಯನ್ನು ದಾಖಲು ಮಾಡಿರುವುದಿಲ್ಲ. 2 ನೇ ಪ್ರತಿವಾದಿಯವರು ಸರಿಯಾಗಿ ಪಾಲು ವಿಭಾಗವನ್ನು ಮಾಡಿಕೊಡುವಂತೆ ಕೇಳಿದ್ದರಿಂದ ನಾನು ಸಿಟ್ಟಾಗಿ ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಿ.ಪಿ.ಸಿ.ನಂ.1299/ಎ, ವಿ.ಪಿ.ಸಿ.ನಂ.84/ಎ, ವಿ.ಪಿ.ಸಿ.ನಂ.125/ಬಿ, ವಿ.ಪಿ.ಸಿ.ನಂ.274/ಎ, ವಿ.ಪಿ.ಸಿ.ನಂ.404/1, ವಿ.ಪಿ.ಸಿ.ನಂ.404/2 ಮತ್ತು ವಿ.ಪಿ.ಸಿ.ನಂ.457 ಆಸ್ತಿಗಳು ಹೆಚ್ಚಿನ ಬೆಲೆಬಾಳುವಂತಹ ಆಸ್ತಿಗಳು ಹಾಗೂ ದೊಡ್ಡ ಮನೆಗಳು ಆಗಿರುತ್ತವೆ ಎಂದರೆ ಸರಿ. 2 ನೇ ಪ್ರತಿವಾದಿಯವರು ಸದರಿ ಆಸ್ತಿಗಳು ಹೆಚ್ಚಿನ ಬೆಲೆಬಾಳುವಂತಹ ಆಸ್ತಿಗಳು ಹಾಗೂ ದೊಡ್ಡ ಮನೆಗಳಲ್ಲಿ ಪಾಲನ್ನು ಕೊಡಬೇಕೆಂದು ಕೇಳಿರುವುದಕ್ಕೆ ಈ ಸುಳ್ಳು

ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನಾದ ಫಕೀರಪ್ಪರವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ.3/2ಬಿ ಆಸ್ತಿಯು ನನ್ನ ತಂದೆಯವರು ಪಾಲು ವಿಭಾಗ ಮಾಡಿಕೊಂಡ ಕಾಲಕ್ಕೆ 2 ನೇ ಪ್ರತಿವಾದಿಯವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೂವಪ್ಪ , ಅವರ ಹೆಂಡತಿ ಮತ್ತು ಅವರ ಮಗ ಮಂಜುನಾಥ ರವರು 7–8 ವರ್ಷಗಳಿಂದ ಬದಾಮಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು 30 ವರ್ಷಗಳಿಂದ ಬದಾಮಿಯಲ್ಲಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯವರ ಮಗ ಸೈನಿಕನಾಗಿ ಬೇರೆ ರಾಜ್ಯದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯವರು ನಮ್ಮ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಸುಳ್ಳು ದಾವೆಯನ್ನು ದಾಖಲು ಮಾಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫಕೀರಪ್ಪರವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 8 ನೇ ಪ್ಯಾರಾದಲ್ಲಿ ಬರೆದಿರುವ ಆಸ್ತಿಯ ವಿಪಿಸಿ ನಂಬರ ನನಗೆ ಹೇಳಲು ಬರುವುದಿಲ್ಲ. ಫಕೀರಪ್ಪರವರು ಅವರ ಹೆಂಡತಿಯ ಹೆಸರಿನಲ್ಲಿ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಫಕೀರಪ್ಪರವರು ಅವರ ಹೆಂಡತಿಯ ಹೆಸರಿನಲ್ಲಿ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದು ನನ್ನ ವಾದ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ನನ್ನ ಅಣ್ಣನವರಿಗೆ ಗೊತ್ತು ಎಂದು ನುಡಿದಿರುತ್ತಾರೆ. ನನ್ನ ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನನ್ನ ಅಣ್ಣನವರು ಮಾಹಿತಿ ನೀಡಿ ನನ್ನ ವಕೀಲರು ಮತ್ತು ನನ್ನ ಅಣ್ಣ ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ಈಗ 60 ವರ್ಷ ವಯಸ್ಸು.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**

**ನ್ಯಾಯಾಧೀಶರು ರೋಣ.**